ಸಾಹಿತ್ಯದ ಬಗ್ಗೆ ಅಪಾರ ಒಳವುಳ್ಳ ರಂಗನಾಥಾಚಾರ್ಯ ಶಾಮಾಚಾರ್ಯ ಲೋಕಾಪುರರಿಗೆ ಸಹಜವಾಗಿ ಲೇಖಕ ವಿ.ಕೃ. ಗೋಕಾಕರ ಪರಿಚಯವಾಯಿತು. ಆಗ ಗೋಕಾಕರು ಸಾಂಗ್ಲಿ ವಿಲಿಂಗ್ಡನ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅವರ ಸಂಗ್ರಹದಲ್ಲಿದ್ದ ಕನ್ನಡ, ಮರಾಠಿ, ಇಂಗ್ಲಿಷ್ ಪುಸ್ತಕಗಳನ್ನೆಲ್ಲ ಲೋಕಾಪುರ ಓದಿ ಮುಗಿಸಿದರು. ಇದೇ ಕಾಲಕ್ಕೆ ಅವರ ಜೀವನದಲ್ಲಿ ಮಹತ್ವದ ತಿರುವೊಂದು ಸಂಭವಿಸಿತು. ಅದು 1955ರ ಕಾಲ. ಕನ್ನಡದ ಮಹತ್ವದ ಸಂಶೋಧಕರಾದ ಶಂ.ಬಾ. ಜೋಶಿಯವರು 'ಮಹಾರಾಷ್ಟ್ರ ಸಂಸ್ಕೃತಿ ಕಾಹೀ ಸಮಸ್ಯಾ' ಎಂಬ ಕೃತಿಯನ್ನು ಮರಾಠಿಯಲ್ಲಿ ಪ್ರಕಟಿಸಿದ್ದರು. ಈ ಕೃತಿಯು ಮರಾಠಿ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಅಲ್ಲೋಲ ಕಲ್ಲೋಲವನ್ನೇ ಉಂಟು ಮಾಡಿತ್ತು. ಆಗ ಮರಾಠಿಯ ಕೆಲ ಸುಪ್ರಸಿದ್ಧ ಲೇಖಕರು ಶಂ.ಬಾ. ಜೋಶಿಯವರನ್ನೇ ಮುಂಬಯಿಗೆ ಕರೆಸಿ ಅವರ ಜೊತೆಗೆ ಅವರ ಈ ಕೃತಿಯ ಬಗ್ಗೆ ಚರ್ಚೆ ಮಾಡುವವರಿದ್ದರು. ಆ ಸಭೆಗೆ ಲೋಕಾಪುರರೂ ಹೋದರು. ಚರ್ಚೆಯಲ್ಲಿ ಅನೇಕ ವಿಷಯಗಳು ಪ್ರಸ್ತಾಪಿತವಾದವು. ಆ ಸಂದರ್ಭದಲ್ಲಿ ಲೋಕಾಪುರರು ಮರಾಠಿಯಲ್ಲಿ ವ್ಯಾಪಕ ಪ್ರಮಾಣದಲ್ಲಿ ಬಳಕೆಯಾಗುವ, ಅಚ್ಚ ಕನ್ನಡದ ಶಬ್ದಗಳ ಕುರಿತು ಪ್ರಸ್ತಾಪಿಸಿದರು. 'ಮರಾಠಿ ಹಳೆಯ ಕಾವ್ಯ' ಸಾಹಿತ್ಯದಲ್ಲಿಯೂ, ಕನ್ನಡ ಪದಗಳನ್ನು ವ್ಯಾಪಕವಾಗಿ ಬಳಸಲಾಗಿದೆ' ಎಂದು ಹೇಳಿದರು. ಮರಾಠಿ ಮತ್ತು ಕನ್ನಡ ಈ ಎರಡೂ ಭಾಷೆಗಳಲ್ಲಿ ಪ್ರಭುತ್ವವನ್ನು ಹೊಂದಿದ್ದ ಶಂ.ಬಾ. ಜೋಶಿಯವರು ಮರಾಠಿ ಭಾಷೆಯಲ್ಲಿ ಅಡಕಗೊಂಡಿರುವ ಕನ್ನಡ ಪದಗಳ ಪಟ್ಟಿಯನ್ನು ತಯಾರಿಸಲು ಅವರಿಗೆ ಹೇಳಿದರು. ಶಂ.ಬಾ. ಸೂಚನೆಯಂತೆ ಯುವಕ ಲೋಕಾಪುರ ಈ ಸಲಹೆಯನ್ನು ಸವಾಲೆಂಬಂತೆ ಸ್ವೀಕರಿಸಿದರು. ಅಂದಿನಿಂದ ರಂಗನಾಥಾಚಾರ್ಯ ಶಾಮಾಚಾರ್ಯ ಲೋಕಾಪುರ ಸಾಹಿತ್ಯ ಕ್ಷೇತ್ರದಲ್ಲಿ 'ರಂ.ಶಾ.' ಆದರು.

ಅಂದಿನಿಂದ ರಂ.ಶಾ. ಮರಾಠಿ ಭಾಷೆಯಲ್ಲಿರುವ ಕನ್ನಡ ಪದಗಳ ಬೆನ್ನು ಹತ್ತಿದರು. ಮಹಾರಾಷ್ಟ್ರದ ಭಕ್ತಿ ಸಾಹಿತ್ಯದಲ್ಲಿಯೇ ಶ್ರೇಷ್ಠ ಕೃತಿ ಎನಿಸಿದ 'ಜ್ಞಾನೇಶ್ವರಿ'ಯನ್ನು ಕೇಂದ್ರವನ್ನಾಗಿ ಇಟ್ಟುಕೊಂಡು ಅಭ್ಯಸಿಸಲು ಆರಂಭಿಸಿದರು. ಇವತ್ತಿಗೂ ಉತ್ತರ ಕರ್ನಾಟಕದಲ್ಲಿ ಆಡು ಮಾತಿನಲ್ಲಿ ಬಳಕೆಯಾಗುವ ಅನೇಕ ಶಬ್ದಗಳು, ಗಾದೆ ಮಾತುಗಳು, ನುಡಿಗಟ್ಟುಗಳು 'ಜ್ಞಾನೇಶ್ವರಿ'ಯಲ್ಲಿ ಸಹಜವಾಗಿ ಉಪಯೋಗಿಸಲ್ಪಟ್ಟಿರುವುದನ್ನು ಕಂಡು ರಂ.ಶಾ. ಅವಾಕ್ಕಾದರು. ಜ್ಞಾನೇಶ್ವರನು ಆಗ ಪ್ರವರ್ಧಮಾನಕ್ಕೆ ಬರುತ್ತಿರುವ ಮರಾಠಿ ಭಾಷೆಗೆ, ಆಗಲೇ ಪ್ರವರ್ಧಮಾನವಾಗಿದ್ದ ಕನ್ನಡ ಭಾಷೆಯನ್ನು ಕಸಿ ಮಾಡಿದ್ದನೆಂದು ರಂ.ಶಾ. ಅವರ ಅರಿವಿಗೆ ಬಂದಿತು. 'ಜ್ಞಾನೇಶ್ವರಿ'ಯಲ್ಲಿ ಮತ್ತಷ್ಟು ಆಳ ಇಳಿದರು. ಆಳ ಆಳ ಇಳಿದಂತೆ ಜ್ಞಾನೇಶ್ವರನಿಗೆ ಕನ್ನಡ ಭಾಷೆಯ, ಲಿಪಿಯ ಪರಿಚಯ ಇರಲಿಕ್ಕೇ ಬೇಕೆಂಬ ನಿರ್ಧಾರಕ್ಕೆ ಬಂದರು.

ಜ್ಞಾನೇಶ್ವರ (1290) ನಾಥ ಸಂಪ್ರದಾಯದ ಬಹುದೊಡ್ಡ ದ್ರಷ್ಟಾರ. ಆತ ಸಂಸ್ಕೃತದ ಭಗವದ್ಗೀತೆಗೆ ಜನ ಭಾಷೆಯಾದ ಮರಾಠಿಯ ಸ್ಪರ್ಶ ನೀಡಿದ. 'ಜ್ಞಾನೇಶ್ವರಿ'ಯಲ್ಲಿ 9,000 ಓವಿಗಳಿವೆ. ಜ್ಞಾನೇಶ್ವರ ಹಠಯೋಗ, ಅದ್ವೈತ, ಭಕ್ತಿಮಾರ್ಗಕ್ಕೆ ಮಹತ್ವವನ್ನು ತನ್ನ ಕೃತಿಯಲ್ಲಿ ನೀಡಿದ್ದಾನೆ. ಜನಸಾಮಾನ್ಯರಿಗೆ ಭಗವದ್ಗೀತೆ ತಿಳಿಯಬೇಕೆಂದು ಅದನ್ನಾತ ಜನಭಾಷೆಯಾದ ಮರಾಠಿಯಲ್ಲಿಯೇ ಬರೆದ. ಅದರಲ್ಲಿ ಆತ ಉಪಯೋಗಿಸಿದಂತಹ ಕನ್ನಡ ಪದಗಳ ಅರ್ಥ ಮರಾಠಿ ವಿದ್ವಾಂಸರಿಗೆ ಆಗಿರಲಿಲ್ಲ. ಆ ಪದಗಳ ಅರ್ಥವನ್ನು ಅವರು ಸಂಸ್ಕೃತ, ಪ್ರಾಕೃತದಲ್ಲಿ ಹುಡುಕಲು ಯತ್ನಿಸಿ ವಿಫಲರಾಗಿದ್ದರು. ಕೆಲವರು ಆ ಪದಗಳ ಅರ್ಥವನ್ನು ತಪ್ಪು ತಪ್ಪಾಗಿ ವ್ಯಾಖ್ಯಾನಿಸಿ ಜ್ಞಾನೇಶ್ವರನ ತತ್ವಜ್ಞಾನದ ಹಾದಿ ತಪ್ಪಿಸಿದ್ದರು. 'ಜ್ಞಾನೇಶ್ವರಿಯು ಅಲೌಕಿಕವಾದ ಗ್ರಂಥ. ಇದಕ್ಕೆ ಅರ್ಥ ಹಚ್ಚುವುದೇ ತಪ್ಪು. ಇದನ್ನು ಕೇವಲ ಭಕ್ತಿಯಿಂದ ಪಠಿಸಬೇಕು' ಎಂಬ ಮಾತು ಮತ್ತು ಸಂಪ್ರದಾಯವು ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ ರಂ.ಶಾ. ಈ ಪದಗಳು ಕನ್ನಡದಿಂದ ಜ್ಞಾನೇಶ್ವರಿಗೆ ಆಯಾತವಾಗಿವೆಯೆಂಬುದನ್ನು ಆಧಾರಸಹಿತವಾಗಿ